ಹಚ್ಚಲು ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ. ಹಾದಿಕೆರೆ ಗ್ರಾಮದಲ್ಲಿ ಪರಿಸ್ಥಿತಿ ಶಾಂತವಾಗಿದೆ. ಪೋಲೀಸರು ಹಳ್ಳಿಯನ್ನು ಭೇಟಿ ಮಾಡುತ್ತಿದ್ದಾರೆ. ಪೋಲೀಸ್ ಸಬ್-ಇನ್ಸ್‌ಪೆಕ್ಟರ್ ಮತ್ತು ಪೋಲೀಸ್ ಡೆಪ್ಯೂಟಿ ಸೂಪರಿಂಟೆಂಡೆಂಟಿನವರು ಸ್ಥಳಗಳನ್ನು ಪರಿಶೀಲಿಸುವರು? ಈ ಗುನ್ನೆಯಲ್ಲಿ ಈಗ ತರೀಕೆರೆ ಡೆಪ್ಯೂಟಿ ಸೂಪರಿಂಟೆಂಡೆಂಟ್‌ರವರು ಬಿಂದ್ದು ತನಿಖೆಗಾಗಿ ತೆಗೆದುಕೊಂಡಿದ್ದು, ಪತ್ತೆ ಮಾಡಲು ಎಲ್ಲಾ ಪ್ರಯತ್ನವನ್ನು ಮಾಡುತ್ತಿದ್ದಾರೆ.

23. ಅನಿಲ ಸ್ಫೋಟ ಪ್ರಕರಣದಲ್ಲಿ ಎಚ್. ಕೆ. ನಾರಾಯಣ ಎನ್ನುವವರ ಮನೆ ನಾಶವಾಗಿದ್ದು ಅವರಿಗೆ ಸೂಕ್ತ ನೆರವು ನೀಡುವ ಬಗ್ಗೆ

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಇತ್ತೀಚೆಗೆ ನಡೆದ ಅಡಿಗೆ ಅನಿಲ ಸ್ಫೋಟ ಪ್ರಕರಣದಲ್ಲಿ ತೀವ್ರ ಗಾಯಗಳಾಗಿ ಆಸ್ಪತ್ರೆಯಲ್ಲಿರುವ ಆಕಾಶವಾಣಿ ಸಂಗೀತ ಕಲಾವಿದರಾದ ಶ್ರೀ ಎಚ್ ಕೆ. ನಾರಾಯಣರವರ ಮನೆಯಲ್ಲಿರುವ ಎಲ್ಲಾ ವಸ್ತುಗಳು, ನಾಶವಾಗಿದ್ದು, ಒಂದು ಮಗುವು ತೀರಿ ಹೋಗಿರುತ್ತದೆ. ಔಷಧೋಪಚಾರಕ್ಕಾಗಲೀ ಅಥವಾ ಚಿಕಿತ್ಸೆಗೂ ಸಹ ಹಣಕಾಸು ಇಲ್ಲದಿರುವ ದುಃಖ್ಖಿತಿಯಲ್ಲಿರುವುದರಿಂದ ಶ್ರೀ ಹೆಚ್. ಕೆ. ನಾರಾಯಣರವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದಾಗಲೀ ಅಥವಾ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದಾಗಲೀ ಸೂಕ್ತ ನೆರವು ನೀಡಬೇಕಾಗಿ ಸರಕಾರಕ್ಕೆ ಕಳಕಳಿಯ ಮನವಿ ಮಾಡುತ್ತೇನೆ.

ಶ್ರೀ ಎಂ. ರಘುಪತಿ.—ನಾನೂ ಮುಖ್ಯ ಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಕರ್ನಾಟಕದ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀಮತಿ ವಿಜಯಾರಾವ್‌ರವರು ಈ ದುರ್ಘಟನೆಯ ಬಗ್ಗೆ ನನಗೆ ಪತ್ರ ಬರೆದು ಶ್ರೀ ಎಚ್. ಕೆ. ನಾರಾಯಣರವರಿಗೆ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಸೂಕ್ತ ಪರಿಹಾರ ನೀಡಬೇಕೆಂದು ಕೋರಿದ್ದರು. ಅಂತೆಯೇ ಸದರಿಯವರ ವೈದ್ಯಕೀಯ ಶುಶ್ರೂಷೆಗಾಗಿ ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ೧೦,೦೦೦ ರೂ. ಗಳನ್ನು ಮಂಜೂರು ಮಾಡಲಾಗಿದೆ.

24. ಗಂಗಾವತಿ ಸಕ್ಕರೆ ಕಾರ್ಖಾನೆಯ ಪುನರಾರಂಭ ಹಾಗೂ ಕಾರ್ಮಿಕರ ವೇತನ ಪಾವತಿಯ ಬೇಡಿಕೆಗಳನ್ನು ಈಡೇರಿಸುವುದರ ಬಗ್ಗೆ

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ. ಗಂಗಾವತಿ ಸಕ್ಕರೆ ಕಾರ್ಖಾನೆಯ ಪುನರಾರಂಭ ಹಾಗೂ ಅವರ ವೇತನ ಪಾವತಿಯ ಬೇಡಿಕೆಗಳನ್ನು ಮಂಡಿಸಿ ಕಾರ್ಮಿಕರು ೧೮-೫-೧೯೮೭ ರಿಂದ ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅವರ ಸತ್ಯಾಗ್ರಹ ಪ್ರಾರಂಭವಾಗಿ ೧೧ ದಿನಗಳಾಗಿದ್ದರೂ ಅವರ ಬೇಡಿಕೆಗಳನ್ನು ಈಡೇರಿಸದಿರುವುದು ವಿಷಾದಕರ. ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ಅವರು ಬೇರೆ ದಾರಿ ಕಾಣದೆ ಅನಿವಾರ್ಯವಾಗಿ ದಿನಾಂಕ ೨೩-೯-೮೭ ರಿಂದ ಶಾಂತಿಯುತವಾಗಿ ಸಾಮೂಹಿಕ ಆಮರಣಾಂತರ ಅನ್ನ ಸತ್ಯಾಗ್ರಹ ಆರಂಭಿಸಿದ್ದಾರೆ. ಇದರಿಂದ ಉಂಟಾಗುವ ಯಾವುದೇ ಅಹಿತಕರ ಘಟನೆಗಳಿಗೆ ನೇರವಾಗಿ ಸರ್ಕಾರವೇ ಹೊಣೆಯಾಗಬೇಕಾಗುವುದೆಂದು ಈ ಮೂಲಕ ಸರ್ಕಾರದ ಗಮನ ಸೆಳೆಯುತ್ತೇನೆ ಮತ್ತು ಅವರ ಬೇಡಿಕೆಯನ್ನು ಕೂಡಲೇ ಈಡೇರಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್. ಕೆ. ಕಾಂತಾ.—ಮಾನ್ಯ ಅಧ್ಯಕ್ಷರೇ, ಸದರಿ ಕಾರ್ಖಾನೆಯಲ್ಲಿ ೨೮೧ ಜನ ಕಾರ್ಮಿಕರಿದ್ದು, ಅವರಿಗೆ ಡಿಸೆಂಬರ್, ೧೯೮೫ ರಿಂದ ಮೇ ೧೯೮೭ರ ವರೆವಿಗೆ ಭಾಗಶಃ ವೇತನ ಪಾವತಿ ಆಗಿದ್ದು ಈ ಅವಧಿಯಲ್ಲಿ ಒಟ್ಟಾರೆ ಇನ್ನೂ ರೂ. ೨೦,೫೯,೫೬೭-೦೦ (ಇಪ್ಪತ್ತು ಲಕ್ಷ ಐವತ್ತೊಂಬತ್ತು ಸಾವಿರ ಐದುನೂರು ಅರವತ್ತೇಳು ರೂಪಾಯಿಗಳು) ಸಂದಾಯ ಆಗಬೇಕಾಗಿದೆ. ಬರಬೇಕಾದ ಬಾಕಿ ವೇತನದ ಬಗ್ಗೆ ಮಜೂರಿ ಸಂದಾಯ ಕಾಯ್ದೆ ಕೆಳಗೆ ಚೀಫ್ ಜ್ಯೂಡಿಶಿಯಲ್ ಮ್ಯಾಜಿಸ್ಟ್ರೇಟ್, ರಾಯಚೂರು, ಅವರ ಮುಂದೆ ಅರ್ಜಿ ಸಲ್ಲಿಸಲಾಗಿದೆ.ಇದಕ್ಕೆ ಶ್ರೀ ಎನ್. ಎನ್. ಕೃಷ್ಣಮೂರ್ತಿ ಚೀಫ್ ಎಕ್ಸಿಕ್ಯೂಟಿವ್